

ಹೂ ಬಿಟ್ಟಾಗ ಹಳದಿ ಬಣ್ಣ, ಉದುರುವಾಗ ಬಿಳಿ ಬಣ್ಣಕ್ಕೆ ತಿರುಗುವ ಮುತ್ತುಗ

ಕೈಗಳು ಅವನನ್ನು ಜೋರಾಗಿ ಬಡಿಯುತ್ತಿದ್ದವು. ಊಹಿಸಿರದ ಬೆಳವಣಿಗೆಗೆ ಈರಣ್ಣನ ಜೊತೆ ಸುತ್ತಲಿನ ಜನರೂ ಅವಕ್ಕಾದರು. ಈರಣ್ಣನ ಮೇಲೆ ನಾನು ಕೈ ಮಾಡಿದ್ದು ಅವರಿಗೆ ಖುಷಿಯಾಗಿರಬೇಕು.

'ಅಕ್ಕ, ಗಿಡ ಇರಲಿ ಬಿಡು ಎಂದು ನಾವು ಎಷ್ಟು ಹೇಳಿದರೂ ಕೇಳದೇ, ಕಿತ್ತು ಹಾಕಿದ' ಎಂದು ಆರೋಪಿಸಿದರು. ಮರಗಿಡಗಳ ಬಗ್ಗೆ ತಮಗೂ ತುಂಬಾ ಸಹಾನುಭೂತಿ ಇರುವುದನ್ನು ನನ್ನೆದುರು ನಿರೂಪಿಸಲೆಂಬಂತೆ ತಲೆಗೊಬ್ಬರು ಈರಣ್ಣನ ಕೆಲಸವನ್ನು ಹಳಿಯತೊಡಗಿದರು. ಇನ್ನೂ ನಾಲ್ಕು ಏಟುಗಳು ಅವನಿಗೆ ಬೀಳಲಿ ಎಂಬ ಇಂಗಿತ ಅವರ ಮಾತಲ್ಲಿ ಎದ್ದು ಕಾಣುತ್ತಿತ್ತು.

ಆಗಾಗ ನಾಟಾ ವ್ಯಾಪಾರ ಮಾಡುತ್ತಿದ್ದ ಈರಣ್ಣನಿಗೆ ಯಃಕಶ್ಚಿತ್ ಒಂದು ಮುತ್ತುಗದ ಗಿಡ ಕಿತ್ತದ್ದು ಅಪರಾಧ ಎನಿಸಿಕೊಳ್ಳಬಹುದೆಂಬ ಊಹೆಯೂ ಇರಲಿಲ್ಲ. ತಾನು ಒಂದಾಗಿ ಕುಳಿತಿದ್ದ ಗುಂಪೇ ತನ್ನನ್ನು ಬಿಟ್ಟು ಒಟ್ಟಾಗಿ, ಆಳಿಗೊಂದು ಕಲ್ಲೆಸೆದಂತೆ ಮಾತಾಡುವುದು ಕೇಳಿ ತಬ್ಬಿಬ್ಬಾದ. ಪರಿಹಾರೋಪಾದಿಯಲ್ಲಿ 'ಗಿಡ ಬದುಕಿಸಿ ಕೊಡುತ್ತೇನೆ' ಎನ್ನುತ್ತಾ ಹತ್ತಿರವೇ ದೊಡ್ಡ ಗುಂಡಿ ತೋಡಿ ಆ ಬಿದ್ದ ಗಿಡವನ್ನು ಎತ್ತಿ ನೆಡತೊಡಗಿದ. ಅಲ್ಲಿದ್ದವರು 'ಇದು ಪ್ರಯೋಜನವಿಲ್ಲದ ಕೆಲಸ' ಎಂದರು. ನನಗೂ ಅದು ಗೊತ್ತಿತ್ತು.

ಅಲ್ಲೀವರೆಗೆ ಬುಸುಗುಡುತ್ತಿದ್ದ ನನಗೆ, ಆಗ ಇದ್ದಕ್ಕಿದ್ದಂತೆ, ಈರಣ್ಣನ ಅಭಿಮಾನ ಭಂಗದ ಪರಿಸ್ಥಿತಿ, ಮುರಿದುಬಿದ್ದ ಬಿಳಿ ಮುತ್ತುಗದಂತೆ ಕಾಣತೊಡಗಿತು. ಮುರಿದ ಗಿಡ ನೆಟ್ಟು, ಕೊಡಪಾನದಲ್ಲಿ ನೀರು ಹೊತ್ತು ತಂದು ಎರೆಯುತ್ತಿದ್ದವನ ಬಳಿ ಹೋಗಿ ಹೇಳಿದೆ, 'ಇದು ಪ್ರಯೋಜನವಿಲ್ಲ ಬಿಡು. ಮಾಡಿದ ತಪ್ಪಿಗೆ ನೀನೇ ಎಲ್ಲಿಂದಲಾದರೂ ಬಿಳಿ ಮುತ್ತುಗದ ಸಸಿ ತಂದು ಕೊಡು, ಅಷ್ಟು ಸಾಕು'. ನನ್ನ ಧ್ವನಿಯಲ್ಲಿ ನನಗೇ ತಿಳಿಯದೆ ಶಾಂತತೆ ಇತ್ತು. ಶಾಪ ವಿಮೋಚನೆಯ ದಾರಿ ಕಂಡವನಂತೆ, ಖಂಡಿತ ಎಲ್ಲಿದ್ದರೂ ಹುಡುಕಿ ತರುವುದಾಗಿ ಈರಣ್ಣ ಹೇಳಿದ. ಅಲ್ಲಿದ್ದವರಿಗೆ ಈ ರಾಜಿ ಅನಿರೀಕ್ಷಿತವಾಗಿತ್ತು. ಇಷ್ಟು ಬೇಗ ಕದನ ಪೂರ್ಣವಿರಾಮವಾಗುವುದು ಅವರಿಗೆ ಬೇಕಿರಲಿಲ್ಲ ಎಂದು ಕಾಣುತ್ತದೆ; ಬಿಳಿ ಮುತ್ತುಗ ಬುಡಮೇಲಾದ ಪ್ರಸಂಗ ಎಳೆ ಎಳೆಯಾಗಿ ನನಗೆ ಹೇಳಿ ಕದನ ಪುನರಾರಂಭಕ್ಕೆ ಯತ್ನಿಸಿದರು. ಮಾಡಬೇಕಾದ ಕಾರ್ಯ ನೆನೆದು ಅಲ್ಲಿಂದ ಹೊರಟೆ. ಷರತ್ತು ಯಾರಿಗೇ ವಿಧಿಸಿರಲಿ ಪ್ರಯತ್ನ ನಾನೂ ಪಡದಿದ್ದಲ್ಲಿ ಸಮಾಧಾನ ಇರದು.

ನಾಟಿ ಔಷಧದಲ್ಲಿ ಅತ್ಯಂತ ಬೇಡಿಕೆಯಲ್ಲಿರುವ ಬಿಳಿ ಮುತ್ತುಗ (Butea Monosperma var. lutea) ದಖನ್ ಪ್ರಸ್ಥಭೂಮಿಯಲ್ಲಿ ಕೇವಲ ನೂರಕ್ಕೂ ಕಡಿಮೆ ಸಂಖ್ಯೆಯಲ್ಲಿರುವುದಾಗಿ ಅಂದಾಜಿಸಲಾಗಿದೆ. ಹೂ ಬಿಟ್ಟಾಗ ಹಳದಿ ಬಣ್ಣ, ಉದುರುವಾಗ ಬಿಳಿ ಬಣ್ಣ ಇರುತ್ತದೆ. ಅನೇಕ ದಿಕ್ಕಿನ ಪ್ರಯತ್ನಗಳ ನಂತರ ಅರಣ್ಯಾಧಿಕಾರಿ ಮಂಜು ಬಡಿಗೇರರ ಮೂಲಕ ಬನವಾಸಿ ಕಾಡಿನ ಬಳಿ ಬಿಳಿ ಮುತ್ತುಗದ ಒಂದೇ ಒಂದು ಮರ ಇರುವುದಾಗಿ ತಿಳಿಯಿತು. ಬೇಸಿಗೆ ಕೊನೆಯಲ್ಲಿ ಬನವಾಸಿ ಅರಣ್ಯಾಧಿಕಾರಿ ಆಶ್ಫಾಕ್ ಸುಗಂಧೀಕರ್ ಅವರು ಕಳುಹಿಸಿ ಕೊಟ್ಟ ಬಿಳಿ ಮುತ್ತುಗದ ಬೀಜಗಳು ನನ್ನ ಕೈ ಸೇರಿದವು. ಬಹುತೇಕ ಎಲ್ಲವೂ ಸಸಿಯಾದವು. ಒಂದು ಸಸಿ ಒಯ್ದು ಈರಣ್ಣನ ಬಳಿ ಕೊಟ್ಟು– 'ನೀನು ಒಪ್ಪಿಕೊಂಡ ಷರತ್ತು ನಾನು ನಡೆಸಿದ್ದೇನೆ. ಅದಕ್ಕೆ ಬದಲು ಈ ಸಸಿ ನಿನ್ನ ತೋಟದಲ್ಲಿ ಬೆಳೆಸಿ ಫೋಟೊ ಕಳಿಸು' ಎಂದೆ. ಆಗಲೆಂಬಂತೆ ತಲೆಯಾಡಿಸಿ ನಾಟಾ ವ್ಯಾಪಾರ ಬಿಟ್ಟಿರುವುದಾಗಿ ಹೇಳಿದ.

ಅಪ್ಪನ ಅಂತ್ಯಕ್ರಿಯೆಯಂದು ಬುಡ ಮೇಲಾದ ಬಿಳಿ ಮುತ್ತುಗ ತನ್ನಂತಹ ಅನೇಕ ಸಸಿಗಳ ಹುಟ್ಟಿಗೆ ಕಾರಣವಾಗಿದ್ದು ಮಾತ್ರವಲ್ಲ, ಹಾಲುಮಡ್ಡಿ ಮರವಾಗಿ ಬೆಳೆಯುತ್ತಿರುವ ಅಪ್ಪನ ಜೊತೆಗೆ ತಾನೂ ಮುಂಗಾರಿಗೆ ಅಳಿದುಳಿದ ಬೇರಿನಿಂದ ಪುನರ್ಜೀವನದ ಚಿಗುರು ಮೂಡಿಸಿ ಎದ್ದಿದೆ. ಮುಗುಳುನಗೆಯೂ ಇಲ್ಲದ ಈರಣ್ಣ ನಮ್ಮನ್ನು ಮನೆಗೆ ಕರೆದು ಆದರಿಸುವಂತಾಗಿದ್ದಾನೆ. ಪುಢಾರಿತನದ ವ್ಯಕ್ತಿತ್ವ ಮಬ್ಬಾಗಿ ಬಾಲ್ಯದ ಆಪ್ತತೆ, ಸಾಮಾಜಿಕ ಜವಾಬ್ದಾರಿ ಇಣುಕತೊಡಗಿದೆ. ಬಿಳಿ ಮುತ್ತುಗ ಈಗ ಈರಣ್ಣನ ತೋಟದಲ್ಲೂ ಬೆಳೆಯುತ್ತಿದೆ.

ಪ್ರತಿಕ್ರಿಯಿಸಿ: feedback@sudha.co.in

